O.S. No. 341/2023
PW.2

ಇಂದು ದಿನಾಂಕ: 14-10-2025 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟಿ ಸವಾಲು: ಪ್ರತಿವಾದಿ ಪರ ಶ್ರೀ ಎಸ್.ಎಲ್. ವಕೀಲರಿಂದ :-</u>

ನನಗೆ ಪ್ರತಿವಾದಿಯ ಮಗ ಶಾಂತನಗೌಡ ಗೊತ್ತು. ಪ್ರತಿವಾದಿಯ ಮಗ ಭತ್ತದ ವ್ಯಾಪಾರ ಮಾಡುತ್ತಾನೆ ಎಂದರೆ ಗೊತ್ತಿಲ್ಲ. ನನಗೆ ನೀರಾವರಿ ಜಮೀನುಗಳಿವೆ. ನಾನು ಭತ್ತ ಬೆಳೆಯುತ್ತೇನೆ. ನನಗೆ ಒಬ್ಬ ಬಜ್ಜಣ್ಣ ಎಂಬುವವರ ಪರಿಚಯವಿದೆ ಎಂದರೆ ಸರಿ. ಸದರಿ ಬಜ್ಜಣ್ಣ ವಾದಿಯ ಸೋದರಮಾವ ಎಂದರೆ ಗೊತ್ತಿಲ್ಲ. ನಾನು ವ್ಯವಹಾರ ಮಾಡುವುದರಿಂದ ಬಜ್ಜಣ್ಣ ನನಗೆ ಪರಿಚಯವಿದ್ದಾನೆ. ಬಜ್ಜಣ್ಣ ಭತ್ತ ಬೆಳೆಯುತ್ತಾರೆ ಎಂದರೆ ಸರಿ. ಬಜ್ಜಣ್ಣ ಮತ್ತು ನಾನು 2018 ರ ಡಿಸೆಂಬರ್ ತಿಂಗಳಲ್ಲಿ ಪ್ರತಿವಾದಿಯರ ಮಗ ಶಾಂತನಗೌಡನಿಗೆ ಅಂದಾಜು ರೂ.22,00,000/- ಮೌಲ್ಯದ ಭತ್ತದ ಚೀಲಗಳನ್ನು ಮಾರಾಟ ಮಾಡಿದ್ದೇವೆ ಎಂದರೆ ಸುಳ್ಳು. ಪ್ರತಿವಾದಿಯ ಮಗ ಶಾಂತನಗೌಡ ನಮಗೆ ಸಕಾಲಕ್ಕೆ ಭತ್ತ ಮಾರಾಟದ ಹಣ ಕೊಟ್ಟಿಲ್ಲ ಎಂದರೆ ಸುಳ್ಳು. ಶಾಂತನಗೌಡ ಭತ್ತ ಮಾರಾಟದ ಹಣ ಸಕಾಲಕ್ಕೆ ಕೊಡದಿರುವುದರಿಂದ ವಾದಿಯ ಹೆಸರಿನಲ್ಲಿ ಕ್ರಯಪತ್ರ ಬರೆದುಕೊಡಬೇಕೆಂದು ನಾನು ಮತ್ತು ಬಜ್ಜಣ್ಣ ಒತ್ತಾಯ ಮಾಡಿರುವುದರಿಂದ ಪ್ರತಿವಾದಿ ವಾದಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಕ್ರಯದ ಕರಾರು ಪತ್ರ ಯಾರು ಬರೆದರು ಮತ್ತು ಯಾರು ಬರೆಸಿದರು ಎಂಬುದು ನನಗೆ ಹೇಳಲು ಬರುವುದಿಲ್ಲ. ಕ್ರಯದ ಕರಾರು ಪತ್ರವನ್ನು ನಾನು ಓದಿಲ್ಲ. ಕ್ರಯದ ಕರಾರು ಪತ್ರದಲ್ಲಿ ಬರೆದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅಂಗಡಿಯಲ್ಲಿ ವಾದಿ, ಪ್ರತಿವಾದಿಗೆ ಕಂತುಗಳಲ್ಲಿ ಒಟ್ಟು ರೂ.32,00,000/- ಗಳನ್ನು ಕೊಟ್ಟಿದ್ದಾರೆ, ನಿಖರವಾಗಿ ಯಾವ ಕಂತು, ಯಾವ ದಿನಾಂಕದಂದು ಕೊಟ್ಟಿದ್ದಾರೆಂಬುದು ಹೇಳಲು ಬರುವುದಿಲ್ಲ. ವಾದಿ ಪ್ರತಿವಾದಿಗೆ ರೂ.32,00,000/- ಕೊಡುವಾಗ ನಾನು, ಬಜ್ಜಣ್ಣ ಮತ್ತು ಪ್ರತಿವಾದಿ ಹಾಜರಿದ್ದರು. ನನ್ನ ಅಂಗಡಿಯಲ್ಲಿ ವಾದಿ ಪ್ರತಿವಾದಿಗೆ ಹಣ ಕೊಟ್ಟಿದ್ದಾರೆಂದು ಬರೆಸಿಲ್ಲ ಎಂದರೆ ಸರಿ. ನನ್ನ ಸಮಕ್ಷಮ ವಾದಿ ಪ್ರತಿವಾದಿಗೆ ಕಂತುಗಳಲ್ಲಿ ಒಟ್ಟು ರೂ.32,00,000/- ಕೊಟ್ಟಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ಮಗನಿಗೆ ಭತ್ತ ಕೊಟ್ಟ ಹಣ ರೂ.22,00,000/- ಗಳನ್ನು ಫೆಬ್ರುವರಿ -2020 ರಲ್ಲಿ ನನಗೆ ಮತ್ತು ಬಜ್ಜಣ್ಣನಿಗೆ

ಪ್ರತಿವಾದಿಯ ಮಗ ಸ್ವಲ್ಪ ಭಾಗ ಕ್ಯಾಷ್ ಮುಖಾಂತರ ಮತ್ತು ಸ್ವಲ್ಪ ಭಾಗ ಬ್ಯಾಂಕ್ ಖಾತೆಯ ಮುಖಾಂತರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ರೂ.22,00,000/- ಕೊಟ್ಟ ನಂತರ ಕರಾರು ಪತ್ರವನ್ನು ರದ್ದುಗೊಳಿಸಿಕೊಡುತ್ತೇವೆಂದು ನಾವು ಹೇಳಿದ್ದರು ರದ್ದುಪಡಿಸಿಕೊಟ್ಟಿಲ್ಲ ಎಂದರೆ ಸುಳ್ಳು. ಸದರಿ ರೂ.22,00,000/- ಹಣ ಕೊಡುವಾಗ ಶರಣಯ್ಯಸ್ವಾಮಿ ತಂದೆ ಅಮರಯ್ಯಸ್ವಾಮಿ ಮುಷ್ಟೂರು ಹಾಜರಿದ್ದರು ಎಂದರೆ ಸುಳ್ಳು. ಭತ್ತದ ಹಣ ಹೆಚ್ಚಿಗೆ ಪಡೆಯಬೇಕೆಂಬ ಉದ್ದೇಶದಿಂದ ವಾದಿಯಿಂದ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸುವಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮತ್ತು ಅವರ ಮಗನಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾನವಿ.